ಶ್ರೀ ಜೀವರಾಜ್ ಆಳ್ವ.—ಬರುವ ವರ್ಷ ಒಂದೆರಡು ಶಾಲೆಗಳನ್ನು ಪ್ರಾರಂಭ ಮಾಡಲಾಗುವುದು.

ಶ್ರೀಮತಿ ಸುವಾಸಂತ.—ಹೆಣ್ಣು ಮಕ್ಕಳು ಎಷ್ಟು ಜನ ಇದ್ದಾರೆ ?

ಶ್ರೀ ಜೀವರಾಜ್ ಆಳ್ವ.—೨೦ ಜನ ಇದ್ದಾರೆ.

ಶ್ರೀಮತಿ ವಂಕ್ಕಾರಂನ್ನೀಸಾ.—೨೦ ಜನ ಸಾಕೇ ? ಮುಂದಿನ ವರ್ಷದಿಂದ ೫೦ ಪರ್ಸೆಂಟ್ ಹೆಣ್ಣು ಮಕ್ಕಳಿಗೆ ಅವಕಾಶ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಜೀವರಾಜ ಆಳ್ವ.—ಉತ್ತರ ಇಲ್ಲ.

ವಾರ್ತಾ ಮತ್ತು ಪ್ರಚಾರ ಇಲಾಖೆಯ ಸಿಬ್ಬಂದಿ ಬಗ್ಗೆ

೫೯೯. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ವಾರ್ತಾ ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ವಾರ್ತಾ ಹಾಗೂ ಪ್ರಚಾರ ಇಲಾಖೆಯ ಕಛೇರಿಗಳೆಷ್ಟಿವೆ ?

ಆ) ಜಿಲ್ಲಾ ಮಟ್ಟದ ಕಚೇರಿಗಳೆಷ್ಟಿವೆ ?

ಇ) ಉಪವಿಭಾಗಗಳ ಕಚೇರಿಗಳೆಷ್ಟಿವೆ ?

ಈ) ಈ ಇಲಾಖೆಯಲ್ಲಿ ಒಟ್ಟು ಇರುವ ಸಿಬ್ಬಂದಿ ಎಷ್ಟು ಮತ್ತು ಅವರಿಗೆ ತಗಲುವ ಖರ್ಚಿಪ್ಪು ?

ಉ) ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸ್ವತಂತ್ರ ಅಧಿಕಾರ ಚಲಾವಣೆ ಇರುವುದರಿಂದ ಇವರಿಗೆ ಪ್ರಥಮ ದರ್ಜೆ ಹುದ್ದೆಗಳಾಗಿ ಮಾರ್ಪಾಟು ಮಾಡುವ ಉದ್ದೇಶ ಸರಕಾರದವರಿಗಿದೆಯೆ ?

ಊ) ಅಲ್ಲಿ ಒಬ್ಬ ಪ್ರಚಾರ ಅಧಿಕಾರಿಯನ್ನು ನೇಮಿಸಲಾಗುವುದೆ ?

ಶ್ರೀ ಜೀವರಾಜ ಆಳ್ವ (ವಾರ್ತಾ ಪ್ರವಾಸೋದ್ಯಮ ರಾಜ್ಯ ಸಚಿವರು).—

ಅ) ೪೪ ಕಚೇರಿಗಳಿವೆ.

ಆ) ೧೯ ಜಿಲ್ಲಾ ಮಟ್ಟದ ಕಚೇರಿಗಳಿವೆ.

ಇ) ೧೬ ಉಪವಿಭಾಗೀಯ ಕಚೇರಿಗಳಿವೆ.

ಈ) ಇಲಾಖೆಯ ಒಟ್ಟು ಸಿಬ್ಬಂದಿ ಸಂಖ್ಯೆ ೫೭೨, ಅವರಿಗೆ ೧,೧೧,೬೦,೭೫೦ ರೂ.ಗಳ ಖರ್ಚು ತಗುಲುತ್ತದೆ.

ಉ) ಸಧ್ಯಕ್ಕೆ ಇಲ್ಲ.

ಊ) ಈಗಾಗಲೇ ಜಿಲ್ಲಾ ಮಟ್ಟದಲ್ಲಿ ವಾರ್ತಾ ಮತ್ತು ಪ್ರಚಾರಾಧಿಕಾರಿ ಇದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ಸರ್ಕಾರದ ಯೋಜನೆಗಳ ಲಾಭವನ್ನು ಫಲಾನುಭವಿಗಳು ಪಡೆಯಲು ಪ್ರಚಾರ ಕಾರ್ಯ ಅತ್ಯಗತ್ಯವಾಗಿ ಬೇಕಾಗಿದೆ. ೪ ಕೋಟಿ ಜನಕ್ಕೆ ೫೭೨ ಜನ ಪ್ರಚಾರಕರು ಮಾತ್ರ ಇದ್ದಾರೆ, ಇದು ಸಾಕಾಗುತ್ತದೆಯೆ ? ಹೆಚ್ಚಿನ ಪ್ರಚಾರ ಕಾರ್ಯ ಮಾಡಲು ಹೆಚ್ಚು ಸಿಬ್ಬಂದಿಯ ಅವಶ್ಯಕತೆಯಿಲ್ಲವೆ ? ಇರತಕ್ಕ ಕ್ಲಾಸನ್ (೨) ದರ್ಜೆ ಅಧಿಕಾರಿಗಳನ್ನು ಅಪ್‌ಗ್ರೇಡ್ ಮಾಡಿ, ಉಪ ವಿಭಾಗಗಳಲ್ಲಿ ಪ್ರಚಾರ ಕಚೇರಿಯನ್ನು ತೆರೆಯುವ ವಿಚಾರದಲ್ಲಿ ಸರ್ಕಾರದ ಅಭಿಪ್ರಾಯ ಏನು ? ಇನ್‌ಫರ್‌ಮೇಷನ್ ಅಸಿಸ್ಟೆಂಟುಗಳನ್ನು ಡೆಪ್ಯೂಟಿ ತಹಶೀಲ್ದಾರ್ ಗ್ರೇಡಿಗೆ ಏರಿಸಿದ್ದರೂ ಸಂಬಳದಲ್ಲಿ ೨೦೦ ರೂಪಾಯಿ ವ್ಯತ್ಯಾಸ ಇದೆ. ಈ ಬಗ್ಗೆ ಮಾನ್ಯ ಸಚಿವರು ಸ್ಪಷ್ಟ ಉತ್ತರ ಕೊಡುತ್ತಾರೆಯೆ ?

ಶ್ರೀ ಜೀವರಾಜ ಆಳ್ವ.—ಮಾನ್ಯ ಸದಸ್ಯರು ಹೇಳಿದ ಸಲಹೆಗಳನ್ನೆಲ್ಲಾ ಪೂರ್ಣವಾಗಿ ಒಪ್ಪುತ್ತೇನೆ ಈ ಬಗ್ಗೆ ವ್ಯಾಪಕವಾದ ಪ್ರಚಾರದ ಅಗತ್ಯವಿದೆ. ಆದರೆ ಈಗ ನಮಗೆ ಸಿಬ್ಬಂದಿಯ ಕೊರತೆ ಇದೆ. ರೀಜನಲ್ ಆಫೀಸ್‌ನಲ್ಲಿ ಕೆಲಸ ಮಾಡುವ ಅಧಿಕಾರಿಯು ಹುದ್ದೆಯನ್ನು ಕ್ಲಾಸ್ (೧) ಎಂದು ಮಾಡಿದ್ದೇವೆ. ಇನ್ನುಳಿದ ಕಛೇರಿಗಳಲ್ಲಿ ಕೆಲಸ ಮಾಡುವ ಅಧಿಕಾರಿಗಳ ಹುದ್ದೆಗಳನ್ನು ಪ್ರಥಮದರ್ಜೆ ಹುದ್ದೆಗಳಾಗಿ ಮಾರ್ಪಾಡು ಮಾಡುವ ಬಗ್ಗೆ ಸರ್ಕಾರದಲ್ಲಿ ಸಲಹೆ ಇದ್ದು, ಈಗ ಸಧ್ಯಕ್ಕೆ ಹಣಕಾಸಿನ ತೊಂದರೆಯಿಂದ ಅದನ್ನು ಒಪ್ಪಿಕೊಳ್ಳುವುದಕ್ಕಾಗಿಲ್ಲ. ಉಪವಿಭಾಗಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಯ ಸಂಖ್ಯೆಯನ್ನು ಹೆಚ್ಚು ಮಾಡುವುದಕ್ಕೆ ಈ ವರ್ಷ ಪ್ರಯತ್ನ ಮಾಡುತ್ತೇವೆ.

ಶ್ರೀ ಆರ್. ವೆಂಕಟರಾವಯ್ಯ.—ಸಿಬ್ಬಂದಿ ಸಂಖ್ಯೆಯನ್ನು ಯಾವಾಗ ಹೆಚ್ಚು ಮಾಡುತ್ತೀರಿ ? ಈ ಇಲಾಖೆಯ ಕಛೇರಿಗಳ ಪಕ್ಕದಲ್ಲಿಯೇ ಇರುವಂತಹ ತಹಶೀಲ್‌ದಾರರ ಕಛೇರಿಯಲ್ಲಿ ಕೆಲಸ ಮಾಡುತ್ತಿರುವ ಡೆಪ್ಯೂಟಿ ತಹಶೀಲ್‌ದಾರರ ಸಂಬಳಕ್ಕೂ ಮತ್ತು ಪ್ರಚಾರ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳ ಸಂಬಳಕ್ಕೂ ೨೦೦ ರೂಪಾಯಿಗಳ ವ್ಯತ್ಯಾಸವಿದೆ. ಇದನ್ನು ಯಾವಾಗ ಸರಿಪಡಿಸುತ್ತೀರಾ ? ಮಾತ್ರ ಹೆಚ್ಚು ಹೆಚ್ಚು ಪ್ರಚಾರ ಮಾಡಲು ಕೂಡಲೇ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜೀವರಾಜ್ ಆಳ್ವ.—ನಮ್ಮ ಈ ಪ್ರಚಾರ ಇಲಾಖೆಗೆ ಹೆಚ್ಚು ಹಣವನ್ನು ಒದಗಿಸ ಬೇಕೆಂದು ನಾವು ಮಂಖ್ಯಮಂತ್ರಿಗಳನ್ನು ಕೇಳಿದ್ದೇವೆ. ಅವರೂ ಸಹ ಒಪ್ಪಿದ್ದಾರೆ. ಆದ್ದರಿಂದ ಬರುವ ವರ್ಷದಲ್ಲಿ ವ್ಯಾಪಕವಾಗಿ ಪ್ರಚಾರ ಮಾಡುವುದನ್ನು ಮತ್ತು ಅವರ ಬೇಡಿಕೆಗಳನ್ನು ಗಮನ ದಲ್ಲಿಟ್ಟುಕೊಂಡು ಕೆಲಸ ಮಾಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಇದನ್ನು ಯಾವಾಗ ಜಾರಿಗೆ ಕೊಡುತ್ತೀರಿ ?

ಶ್ರೀ ಜೀವರಾಜ ಆಳ್ವ.—ಬರುವ ಹಣಕಾಸಿನ ವರ್ಷದಲ್ಲಿ.

ಅಧ್ಯಕ್ಷರು.—ಈಗ ೧೨ ಗಂಟೆ ಆಯಿತು. ಇಲ್ಲಿಗೆ ಪ್ರಶ್ನೋತ್ತರ ಸಮಯ ಮುಗಿಯಿತು. ಆದರೂ ಸಹ ಇನ್ನುಳಿದ ಪ್ರಶ್ನೆಗಳನ್ನು ತೆಗೆದುಕೊಳ್ಳುತ್ತೇನೆ. ಸಂಬಂಧಪಟ್ಟ ಸದಸ್ಯರುಗಳು ೨-೩ ಉಪ-ಪ್ರಶ್ನೆಗಳನ್ನು ಮಾತ್ರ ಹಾಕಬೇಕು.

ಸಚಿವ ಸಂಪುಟದ ವಿವಿಧ ಸಚಿವರುಗಳು ವಿದೇಶ ಪ್ರವಾಸ ಕೈಗೊಂಡಿರುವ ಕುರಿತು.

೬೭೯ ಶ್ರೀ ಯು. ಭೂಪತಿ(ಸಂಡೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಚಿವ ಸಂಪುಟದ ವಿವಿಧ ಮಂತ್ರಿಗಳು ಸರಕಾರಿ ಖರ್ಚಿನಲ್ಲಿ ವಿದೇಶ ಪ್ರಯಾಣಗಳನ್ನು ಮಾಡಿರುವುದರಿಂದ ಸರ್ಕಾರಕ್ಕೆ ತಗುಲಿದ ಖರ್ಚು ಎಷ್ಟು ?

ಆ) ವಿವಿಧ ಮಂತ್ರಿಗಳು ಯಾವ್ಯಾವ ದೇಶಗಳಿಗೆ ಪ್ರವಾಸ ಮಾಡಿದ್ದಾರೆ ಹಾಗೂ ಪ್ರವಾಸ ಗಳ ಉದ್ದೇಶಗಳೇನು ?

ಇ) ರಾಜ್ಯದ ಜನತೆಗೆ ಈ ಪ್ರವಾಸಗಳಿಂದ ದೊರೆಯುವ ಪ್ರಯೋಜನವೇನು ?

ಶ್ರೀ ರಾಮಕೃಷ್ಣ ಹೆಗಡೆ(ಮುಖ್ಯ ಮಂತ್ರಿಗಳು).—

ಅ) ಈ ಸಚಿವ ಸಂಪುಟ ಅಧಿಕಾರಕ್ಕೆ ಬಂದನಂತರ ಅಂದಾಜು ರೂ.೫೫,೯೭,೨೦೦-೦೦ ಖರ್ಚು ಆಗಿದೆ.

ಆ) ಮತ್ತು ಇ ವಿವರಗಳನ್ನು ಅನುಬಂಧ 'ಅ' ನಲ್ಲಿ ನೀಡಲಾಗಿದೆ.